**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು**

**ಸಿ.ಸಿ. ಸಂಖ್ಯೆ: 2469/2021**

ಫಿರ್ಯಾದಿ : ಶ್ರೀ ಗೋಕುಲಂ ಚೀಟ್ ಅಂಡ್ ಫೈನಾನ್ಸ್ ಕೋ.ಪ್ರೈ.ಲಿ.,
ಪ್ರತಿನಿಧಿಸುವವರು ರಜೆಶ.ವಿ.,ಬ್ರಾಂಚ್ ಮ್ಯಾನೇಜರ್, 38 ವರ್ಷ,

ವಿರುದ್ಧ

ಆರೋಪಿ : ಮನೋಜಕುಮಾರ್ ಎಸ್ ಬಿನ್ ಸ್ವಾಮಿ, 28 ವರ್ಷ,
ನಂ:481, ಮೇನ್ ರೋಡ್, ಸಿಂಧುವಳ್ಳಿ ಗ್ರಾಮ,
ಜಯಪುರ ಹೋಬಳಿ, ಮೈಸೂರು ತಾಲ್ಲೂಕು.

: ಆರೋಪಣೆ :

ಶ್ರೀಮತಿ.ಶಶಿಕಲಾ.ಜೆ.,ಬಿ.ಎ, ಎಲ್‌ಎಲ್‌ಬಿ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೇ:

ಮೇಲ್ಕಂಡ ಆರೋಪಿಯಾದ ನೀವು ಫಿರ್ಯಾದುದಾರರ ಚೀಟ್ ಅಂಡ್ ಫೈನಾನ್ಸ್ ಕಂಪನಿಯ ಸದಸ್ಯರಾದ ಪ್ರವೀಣ್.ಬಿ.ವಿ.ರವರಿಗೆ ಜಾಮೀನುದಾರರಾಗಿದ್ದು, ಸದರಿ ಕಂಪನಿಯಿಂದ ಪ್ರವೀಣ್.ಬಿ.ವಿ.ರವರು ಬಹುಮಾನ ಮೊತ್ತವನ್ನು ಪಡೆದುಕೊಂಡಿದ್ದರು, ಅರೋಪಿಯಾದ ನೀವು ಚಿಟ್ ಬಹುಮಾನ ಮೊತ್ತವನ್ನು ಸ್ವೀಕರಿಸುವ ಸಮಯದಲ್ಲಿ ಪ್ರವೀಣ್.ಬಿ.ವಿ.ರವರಿಗೆ ಜಾಮೀನುದಾರರಾಗಿ ನಿಂತಿದ್ದು, ಪ್ರವೀಣ್.ಬಿ.ವಿ.ರವರು ಫಿರ್ಯಾದುದಾರರ ಕಂಪನಿಗೆ 2021 ನೇ ಇಸವಿ ಫೆಬ್ರವರಿ ತಿಂಗಳ ಕೊನೆಯ ಎರಡು ಕಂತುಗಳನ್ನು ಪಾವತಿಸಲು ವಿಫಲರಾಗಿದ್ದು, ಫಿರ್ಯಾದುದಾರರು ಕಂತುಗಳನ್ನು ಮರುಪಾವತಿಸಲು ಕೇಳಿಕೊಂಡಾಗ ಆರೋಪಿಯಾದ ನೀವು ಉಳಿತಾಯ ಖಾತೆ ಹೊಂದಿರುವ ಕೊಟೇಕ್ ಮಹೀಂದ್ರ ಬ್ಯಾಂಕ್, ತಾಂಡವಪುರ ಶಾಖೆ, ನಂಜನಗೂಡು, ಚಕ್ ನಂ:000001 ಕ್ಕೆ ರೂ.1,14,5903/- ಗಳನ್ನು ದಿನಾಂಕ:10.02.2021 ಎಂದು ನಮೂದಿಸಿ ಫಿರ್ಯಾದುದಾರರ ಕಂಪನಿಯ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚಕ್ಕನ್ನು ನಗದೀಕರಿಸಿಕೊಳ್ಳಲು ತಮ್ಮ ಕಂಪನಿಯ ಖಾತೆಯಿರುವ ಕ್ಯಾಥೋಲಿಕ್ ಸಿರಿಯನ್ ಬ್ಯಾಂಕ್ ಲಿ.,, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು "ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ದಿ:12.02.2021 ರಂದು

SJ
20/2/23

Manoj Kumar S

ನಗಧೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ.27.02.2021 ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ಅರ್ಡಿನರಿ ಪೋಸ್ಟ್ ಮೂಲಕ ಆರೋಪಿಯಾದ ನಿಮಗೆ ಜಾರಿಯಾಗಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

ಪ್ರಶ್ನೆ-1 : ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?

ಉತ್ತರ : ಹೌದು

ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ? ಅಥವಾ ಪ್ರತಿರಕ್ಷೆ ಮಾಡಿಕೊಳ್ಳುವಿರೋ ?

ಉತ್ತರ : ತಪ್ಪು ಮಾಡಿಲ್ಲ. ವಿಚಾರಣೆಯಾಗಬೇಕು

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 20.02.2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).

Sd/- 20/2/23

2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

Manoj Kumar S